# ಕರ್ನಾಟಕ ಸರ್ಕಾರ

ಸಂಖ್ಯೆ: ಕಪಂರಾಅ/ಅಭಿವೃದ್ಧಿ/79/2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:04-12-2020.

## ಸುತ್ತೋಲೆ

**ವಿಷಯ:** **"ಮನೆ-ಮನೆ ಸಮೀಕ್ಷೆ"** ಕೈಗೊಂಡು 0-18 ವರ್ಷದೊಳಗಿನ ಮಕ್ಕಳನ್ನು ಗುರುತಿಸಿ ಮಕ್ಕಳನ್ನು ಅಂಗನವಾಡಿ / ಶಾಲೆಗೆ ನೋಂದಣಿ ಮಾಡುವಂತೆ ಗ್ರಾಮ ಪಂಚಾಯತಿಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ

**ಉಲ್ಲೇಖ:** 1)ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 1061 ಗ್ರಾಪಂಅ 2019, ದಿನಾಂಕ:11.12.2019

2)ಸರ್ಕಾರದ ಇದೇ ಸಮ ಸಂಖ್ಯೆಯ ಪತ್ರ ದಿನಾಂಕ:16.12.2019

3)ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15768/2013 ರ ವಿಚಾರಣೆ ಸಂದರ್ಭದಲ್ಲಿ ನೀಡಿದ ಆದೇಶ ದಿನಾಂಕ:18.12.2019

4) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 1061 ಗ್ರಾಪಂಅ 2019, ದಿನಾಂಕ:20-02-2020.

5)ಮಾನ್ಯ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15768/2013ರ ವಿಚಾರಣೆ ಸಂದರ್ಭದಲ್ಲಿ ನೀಡಿದ ಆದೇಶ ದಿನಾಂಕ:16.03.2020

***

ಭಾರತ ಸಂವಿಧಾನದ ಕಲಂ 21(ಎ) ಪ್ರಕಾರ 6 ರಿಂದ 14 ವರ್ಷದ ಪ್ರತಿ ಮಗು 8 ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕಾಗಿರುತ್ತದೆ. ಉಲ್ಲೇಖ (1) ರ ಸುತ್ತೋಲೆ ಮತ್ತು ಉಲ್ಲೇಖ (2)ರ ಸರ್ಕಾರದ ಪತ್ರದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲು ಸ್ಥಳೀಯ ಸರ್ಕಾರಗಳು ಕೈಗೊಳ್ಳಬೇಕಾದ ಕಾರ್ಯಕ್ರಮದ ಮಾರ್ಗಸೂಚಿಗಳ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲು The Karnataka Right of Children to Free and Compulsory Education Rules, 2012 ರನ್ವಯ ಗ್ರಾಮ ಪಂಚಾಯಿತಿಗಳು ಗ್ರಾಮ ಶಿಕ್ಷಣ ರಿಜಿಸ್ಟರ್ ನಿರ್ವಹಿಸಬೇಕಾಗಿರುತ್ತದೆ. ಈ ಬಗ್ಗೆ ಉಲ್ಲೇಖ (1) ರ ಸುತ್ತೋಲೆಯಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳು ಗ್ರಾಮ ಶಿಕ್ಷಣ ರಿಜಿಸ್ಟರ್ ನಿರ್ವಹಿಸಲು ತಿಳಿಸಲಾಗಿದೆ. The Karnataka Right of Children to Free and Compulsory Education (Amendment) Rules,2014 ರನ್ವಯ ಮಕ್ಕಳ ಹಾಜರಾತಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ತಿಳಿಸಲಾಗಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 58 ರಲ್ಲಿ ಗ್ರಾಮ ಪಂಚಾಯಿತಿಯ ಪ್ರಕಾರ್ಯಗಳ ಬಗ್ಗೆ ವಿವರಿಸಲಾಗಿದ್ದು, ಅದರಲ್ಲಿ ಗ್ರಾಮ ಪಂಚಾಯಿತಿಯು ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಮಕ್ಕಳಿಗೆ ಸಾರ್ವತ್ರಿಕವಾಗಿ ರೋಗ ನಿರೋಧಕ ಚುಚ್ಚುಮದ್ದು ನೀಡುವ ಕಾರ್ಯಕ್ರಮಗಳನ್ನು ಸಾಧಿಸುವುದು ಪ್ರಮುಖವಾದ ಕಡ್ಡಾಯ ಕಾರ್ಯವಾಗಿರುತ್ತದೆ.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸಲು ಕಟ್ಟುನಿಟ್ಟಿನ ಕ್ರಮಕೈಗೊಳ್ಳುವುದು ಅವಶ್ಯವಾಗಿದೆ. ಈ ಕಾರ್ಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಉಲ್ಲೇಖ (3) ರ ರಿಟ್ ಪಿಟಿಷನ್ ವಿಚಾರಣೆ ಸಂದರ್ಭದಲ್ಲಿ ಆದೇಶಿಸಿರುವಂತೆ ಸ್ಥಳೀಯ ಗ್ರಾಮ ಪಂಚಾಯಿತಿಗಳು ಪ್ರಮುಖ ಪಾತ್ರ ವಹಿಸಬೇಕಾಗಿರುತ್ತದೆ. ಈ ದಿಶೆಯಲ್ಲಿ ಮುಂದಿನ ಒಂದು ವರ್ಷದವರೆಗೆ ಕೈಗೊಳ್ಳಬೇಕಾದ ಕಾರ್ಯ ಯೋಜನೆಯನ್ನು ತಯಾರಿಸಿ ವಿವರವಾದ ಮಾರ್ಗಸೂಚಿಗಳನ್ನು ಉಲ್ಲೇಖ(4) ರ ಸರ್ಕಾರದ ಸುತ್ತೋಲೆಯಲ್ಲಿ ಸವಿವರವಾಗಿ ನೀಡಲಾಗಿರುತ್ತದೆ.

ಉಲ್ಲೇಖ (5)ರ ರಿಟ್ ಪಿಟಿಷನ್ ವಿಚಾರಣೆ ಸಂದರ್ಭದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿರುತ್ತದೆ.

"Therefore, in addition to the interim directions which are already issued, we issue the following interim directions:

1. The State shall ensure by issuing appropriate directions to all local authorities within the meaning of RTE Act, (a) firstly, to immediately conduct household survey as provided under sub-rule (1) of Rule 6; (b) Secondly, to direct that the household survey shall be completed by all local authorities on or before 30th April 2020; and (c) thirdly, to ensure that the record of children from their birth till they attain 14 years is generated in terms of Rule 6 at least six weeks before the commencement of the immediately next academic year;
2. The State Government, while issuing directions and guidelines as above, shall exercise powers under sub-sections (1) and (2) of Section 35 of the RTE Act. The State Government shall also issue directions to the local authorities to update the record required to be maintained as per Rule 6 of the said Rules of 2012 at least two months in advance before the commencement of every subsequent academic year by conducting household surveys;"

ಮೇಲ್ಕಂಡ ಆದೇಶದ ಹಿನ್ನೆಲೆಯಲ್ಲಿ 2020-21ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಿ ಹಾಜರಾಗುವಂತೆ ಮಾಡಲು ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ದಿನಾಂಕ:20-02-2020 ರಂದು ಸುತ್ತೋಲೆ ಹೊರಡಿಸಿ ವಿವರವಾದ ಮಾರ್ಗಸೂಚಿಗಳನ್ನು ನೀಡಲಾಗಿದ್ದು, ಆದಾಗ್ಯೂ ಈ ಸುತ್ತೋಲೆಯನ್ನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಹಾಗೂ ಪ್ರಸ್ತುತ ಬದಲಾದ ಕೋವಿಡ್-19 ಸನ್ನಿವೇಶಕ್ಕಗನುಗುಣವಾಗಿ ಮಾರ್ಪಡಿಸುವುದು ಹಾಗೂ 0-18 ವರ್ಷದೊಳಗಿನ ಮಕ್ಕಳನ್ನು ಗುರುತಿಸಿ ಮಕ್ಕಳನ್ನು ಅಂಗನವಾಡಿ / ಶಾಲೆಗೆ ನೋಂದಣಿ ಮಾಡುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿದೆ. ಈ ಕಾರ್ಯದಲ್ಲಿ ಮಾನ್ಯ ಉಚ್ಚನ್ಯಾಯಾಲಯವು ಆದೇಶಿಸಿರುವಂತೆ ಸ್ಥಳೀಯ ಗ್ರಾಮ ಪಂಚಾಯಿತಿಗಳು ಪ್ರಮುಖ ಪಾತ್ರ ವಹಿಸಬೇಕಾಗಿರುತ್ತದೆ. ಈ ದಿಶೆಯಲ್ಲಿ ಕೈಗೊಳ್ಳಬೇಕಾದ ಕಾರ್ಯ ಯೋಜನೆಯನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

1. ಗ್ರಾಮ ಪಂಚಾಯಿತಿ ಹಂತದಲ್ಲಿ ಗ್ರಾಮ ಶಿಕ್ಷಣ ಕಾರ್ಯಪಡೆಯು ಉಲ್ಲೇಖ(2)ರಲ್ಲಿ ವಿವರಿಸಿದಂತೆ ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳಲು ದಿನಾಂಕ:**11.12.2020ರ** ಒಳಗಾಗಿ ಸಭೆ ನಡೆಸಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಶಾಲೆಗೆ ಮರಳಿ ಸೇರಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಬೇಕು.
2. ಗ್ರಾಮ ಪಂಚಾಯಿತಿಯ ಎಲ್ಲಾ ಶಾಲೆಗಳ ವ್ಯಾಪ್ತಿಯಲ್ಲಿ ಶಾಲೆಗೆ ಸೇರದ, ಸೇರಿ ಗೈರು ಹಾಜರಾಗುತ್ತಿರುವ ಮಕ್ಕಳ ಸಮೀಕ್ಷೆಯನ್ನು ಗ್ರಾಮ ಪಂಚಾಯಿತಿ ಸಿಬ್ಬಂದಿ ಮತ್ತು ಅಂಗನವಾಡಿ ಕಾರ್ಯಕರ್ತೆಯರು/ ಮಹಿಳಾ ಸ್ವ-ಸಹಾಯ ಗುಂಪುಗಳ ಪ್ರತಿನಿಧಿಗಳು.ಪ್ರತಿ ತಂಡದಲ್ಲಿ ಗ್ರಾಮ ಪಂಚಾಯತಿ ಸಿಬ್ಬಂದಿ / ಒಬ್ಬ ಅಂಗನವಾಡಿ ಕಾರ್ಯಕರ್ತೆ ಮತ್ತು ಮಹಿಳಾ ಸ್ವಸಹಾಯ ಸಂಘದ ಪ್ರತಿನಿಧಿಗಳು ಇರತಕ್ಕದ್ದು. ದಿನಾಂಕ:**15.12.2020** ರಿಂದ **"ಮನೆ-ಮನೆ ಸಮೀಕ್ಷೆ"** ಕೈಗೊಂಡು ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಿ ಸಮೀಕ್ಷೆ ಪ್ರಕ್ರಿಯೆಯನ್ನು ದಿನಾಂಕ:**15.01.2021ರ** ಒಳಗಾಗಿ ಪೂರ್ಣಗೊಳಿಸಬೇಕು.

3. ಸಮೀಕ್ಷೆ ಕಾರ್ಯವನ್ನು ಇ-ಆಡಳಿತ ಇಲಾಖೆಯು ಅಭಿವೃದ್ಧಿ ಪಡಿಸಿದ App ಮೂಲಕ ಕೈಗೆತ್ತಿಕೊಳ್ಳುವುದು. ಈ ಸಂಬಂಧ ದಿನಾಂಕ:10.11.2020 ರಂದು ತರಬೇತಿಯನ್ನು ನೀಡಲಾಗಿರುತ್ತದೆ.
4. ಜಿಲ್ಲೆಯಲ್ಲಿ DMIS, DPMU ರವರು ಹಾಗೂ ತಾಲ್ಲೂಕಿನಲ್ಲಿ TMIS ರವರು, ಕ್ಷೇತ್ರದಲ್ಲಿ ಸಮೀಕ್ಷೆ ನಡೆಸುವ ಸರ್ವೆಯರ್ಸ್ ರವರಿಗೆ ಅಗತ್ಯ ತಾಂತ್ರಿಕ ನೆರವು ಆಗಿಂದಾಗ್ಗೆ ನೀಡುವುದು.
5. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹೀಗೆ ಗುರುತಿಸಲಾದ ಎಲ್ಲಾ ಮಕ್ಕಳ ವಿವರವನ್ನು ಪೋರ್ಟ್ ಲ್ ನಿಂದ ಪಡೆದ ನಿಗದಿತ ನಮೂನೆಯಲ್ಲಿ ನಿರ್ವಹಿಸಬೇಕು ಹಾಗೂ ಗ್ರಾಮ ಶಿಕ್ಷಣ ವಹಿಯಲ್ಲಿಯೂ ನಮೂದಿಸುವುದು.
6. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸರ್ವೆ ಕಾರ್ಯ ನಡೆಸುವ ಸಿಬ್ಬಂದಿಯವರಿಗೆ ಅಗತ್ಯವಾದ ತರಬೇತಿಯನ್ನು ನೀಡಬೇಕು.
7. ಸಮೀಕ್ಷಾ ಕಾರ್ಯದಲ್ಲಿ ಮೊಬೈಲ್ App ಬಳಕೆ ಕುರಿತಂತೆ ಯಾವುದೇ ಮಾಹಿತಿ/ಪ್ರಶ್ನೆಗಳಿದ್ದಲ್ಲಿ ರಾಜ್ಯ ಮಟ್ಟದ ಸಹಾಯವಾಣಿ: 8448445014 ನ್ನು ಸಂಪರ್ಕಿಸಬಹುದು.
8. ಮನೆ-ಮನೆ ಸಮೀಕ್ಷೆ ಕುರಿತು ಜಿಲ್ಲಾವಾರು/ತಾಲ್ಲೂಕುವಾರು ಪ್ರಗತಿ ಪರಿಶೀಲನೆ ನಡೆಸಬೇಕು.
9. ಪ್ರತಿ ತಂಡದ ಒಬ್ಬರಿಗೆ ಕುಟುಂಬ ಸಮೀಕ್ಷೆಗೆ ರೂ.5.00 ನಿಗಧಿಪಡಿಸಿದ್ದು, ಪ್ರತಿ ತಂಡದವರು ಪ್ರತಿ ದಿನ 50 ಕುಟುಂಬಗಳ ಸಮೀಕ್ಷೆ ಮಾಡುವುದು. ಸಮೀಕ್ಷೆಗೆ ತಗಲುವ ವೆಚ್ಚವನ್ನು ಗ್ರಾಮ ಪಂಚಾಯತಿಗಳು ಸ್ವಂತ ಸಂಪನ್ಮೂಲದಿಂದ ಭರಿಸುವುದು.
10. ಶಿಕ್ಷಣ ಇಲಾಖೆ ವತಿಯಿಂದ ಪ್ರತಿ ಗ್ರಾಮ ಪಂಚಾಯಿತಿಗೆ ನೀಡುವ ರೂ. 1,000/- ಗಳನ್ನು ಗ್ರಾಮ ಪಂಚಾಯತಿಗಳು ಆಯ್ಕೆ ಮಾಡಿದ ಮಹಿಳಾ ಸ್ವ-ಸಹಾಯ ಗುಂಪುಗಳ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಕ್ಕೆ ಈ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಬಿಡುಗಡೆ ಮಾಡುವುದು.
11. ಮನೆ-ಮನೆ ಸಮೀಕ್ಷೆಯಲ್ಲಿ ಗುರುತಿಸಲಾದ ಶಾಲೆಯಿಂದ ಹೊರಗುಳಿದ ಮಕ್ಕಳ ದಾಖಲಾತಿ, ಹಾಜರಾತಿ ಪ್ರಕ್ರಿಯೆಯನ್ನು, ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಅಗತ್ಯ ಮಾರ್ಗದರ್ಶನ ಮತ್ತು ನೆರವು, ನೀಡುವುದು.
12. ಮನೆ-ಮನೆ ಸಮೀಕ್ಷೆಯ ಸರ್ವೆ ತಂಡದಿಂದ ಕೈಗೊಳ್ಳಬೇಕಿರುವ ಕಾರ್ಯಚಟುವಟಿಕೆಗಳ ಪಟ್ಟಿಯು ಈ ಕೆಳಕಂಡಂತಿದೆ.

| ಹಂತ | ಕ್ರಮ | ಜವಾಬ್ದಾರಿ | ಬಳಕೆ ಮಾಡಬೇಕಿರುವ ಅಪ್ಲಿಕೇಶನ್ |
|---|---|---|---|
| 1. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಮು.ಕಾ.ನಿ).ರವರ ಲಾಗಿನ್ ಸೃಜನೆ | ಪಂಚಾಯತ್ ರಾಜ್ ಆಯುಕ್ತಾಲಯ | https://childrensurvey.karnataka.gov.in |
| 2. | ಕಾರ್ಯನಿರ್ವಾಹಕ ಅಧಿಕಾರಿ (ಕಾ.ನಿ.)ರವರ ಲಾಗಿನ್ ಸೃಜನೆ | ಸಂಬಂಧಿತ ಮು.ಕಾ.ನಿ., ಜಿಲ್ಲಾ ಪಂಚಾಯತ್ | https://childrensurvey.karnataka.gov.in |
| 3. | ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಂ.ಅ.ಅ.) ರವರ ಲಾಗಿನ್ ಸೃಜನೆ | ಸಂಬಂಧಿತ ಕಾ.ನಿ., ತಾಲೂಕು ಪಂಚಾಯತ್ | https://childrensurvey.karnataka.gov.in |
| 4. | ಮೋಜಣಿದಾರರ ಲಾಗಿನ್ ಸೃಜನೆ | ಸಂಬಂಧಿತ ಕಾ.ನಿ., ತಾಲೂಕು ಪಂಚಾಯತ್ | https://childrensurvey.karnataka.gov.in |

| | | | |
|---|---|---|---|
| 5. | ಸಮೀಕ್ಷೆಕಾರರನ್ನು ( ಸರ್ವೇಯರ್ ) ಪಂಚಾಯತ್‌ಗೆ ಮ್ಯಾಪ್ ಮಾಡುವುದು | ಸಂಬಂಧಿತ ಕಾ.ನಿ., ತಾಲೂಕು ಪಂಚಾಯತ್ | https://childrensurvey.karnataka.gov.in |
| 6. | ಸರ್ವೇ ತಂಡದ ಒಬ್ಬ ಸದಸ್ಯರಿಂದ ಮೊಬೈಲ್ ಆಪ್ ನ್ನು ಡೌನ್ ಲೋಡ್ ಮಾಡಿಕೊಳ್ಳುವುದು. | ಸಂಬಂಧಿತ ಸಮೀಕ್ಷೆಕಾರ ( ಸರ್ವೇಯರ್ ) | ಗೂಗಲ್ ಪ್ಲೇ ಸ್ಟೋರ್ |
| 7. | ಪ್ರಾಥಮಿಕ ದತ್ತಾಂಶ ಡೌನ್ ಲೋಡ್ ಆಗುತ್ತಿದೆ. | ಸಂಬಂಧಿತ ಸಮೀಕ್ಷೆಕಾರ ( ಸರ್ವೇಯರ್ ) | ಮೊಬೈಲ್ ಆಪ್ |
| 8. | ದ್ವಿತೀಯ ದತ್ತಾಂಶ ಡೌನ್ ಲೋಡ್ ಆಗುತ್ತಿದೆ. | ಸಂಬಂಧಿತ ಸಮೀಕ್ಷೆಕಾರ ( ಸರ್ವೇಯರ್ ) | ಮೊಬೈಲ್ ಆಪ್ |
| 9. | ಮೊಬೈಲ್ ಅಪ್ಲಿಕೇಶನ್ ಬಳಸಿ ಸರ್ವೇ ಮಾಡುವುದು. | ಸಂಬಂಧಿತ ಸಮೀಕ್ಷೆಕಾರ ( ಸರ್ವೇಯರ್ ) | ಮೊಬೈಲ್ ಆಪ್ |
| 10. | ಮೊಬೈಲ್ ಅಪ್ಲಿಕೇಶನ್ ನಲ್ಲಿ ಸೆರೆಹಿಡಿಯಲಾದ ದತ್ತಾಂಶವನ್ನು ಪರಿಶೀಲಿಸುವುದು. | ಸಂಬಂಧಿತ ಸಮೀಕ್ಷೆಕಾರ ( ಸರ್ವೇಯರ್ ) | ಮೊಬೈಲ್ ಆಪ್ |
| 11. | ಕಾಲಕಾಲಕ್ಕೆ ಸಂಗ್ರಹಿಸಲಾದ ದತ್ತಾಂಶವನ್ನು, ದತ್ತಾಂಶ ನಾಶಕ್ಕೆ ಅವಕಾಶ ಕೊಡದಂತೆ ಸರ್ವರ್ ಗೆ ಅಪ್ ಲೋಡ್ ಮಾಡುವುದು. | ಸಂಬಂಧಿತ ಸಮೀಕ್ಷೆಕಾರ ( ಸರ್ವೇಯರ್ ) | ಮೊಬೈಲ್ ಆಪ್ |
| 12. | ವೆಬ್ ಆಧಾರಿತ ವರದಿಗಳ ದೈನಂದಿನ ಪರಿಶೀಲನೆ ಮೂಲಕ ಸರ್ವರ್ ಗೆ ಅಪ್ ಲೋಡ್ ಮಾಡಲಾದ ದತ್ತಾಂಶವನ್ನು ದೈನಂದಿನ ಪರಿಶೀಲಿಸುವುದು. | ಸಂಬಂಧಿತ ಮು.ಕಾ.ನಿ., ಕಾ.ನಿ., ಪಂ.ಅ.ಅ. | https://childrensurvey.karnataka.gov.in |

ಮೇಲೆ ವಿವರಿಸಿರುವಂತೆ , ಕ್ರಮಕೈಗೊಂಡು, ಭಾರತ ಸಂವಿಧಾನ, The Karnataka Right of children to Free and Complulsory Rules,2012 ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಆಶಯವನ್ನು ಹಾಗೂ ಮಕ್ಕಳ ಶಿಕ್ಷಣದ ಹಕ್ಕನ್ನು ಜಾರಿಗೊಳಿಸಲು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು, ತಿಳಿಸಿದೆ.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಇಲಾಖೆ

**ಇವರಿಗೆ**:

1. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು
2. ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು(ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
3. ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು(ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ ರವರಿಗೆ
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ಇಲಾಖೆ ಇವರ ಆಪ್ತ ಕಾರ್ಯದರ್ಶಿರವರಿಗೆ
5. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ಇಲಾಖೆ ಇವರ ಆಪ್ತ ಕಾರ್ಯದರ್ಶಿರವರಿಗೆ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿರವರಿಗೆ
7. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ.ರಸ್ತೆ, ಬೆಂಗಳೂರು.
8. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು.
9. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.